ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1455
ಸದಸ್ಯರ ಹೆಸರು	:	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	24-09-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯಿತಿಯ ಈ ಸ್ವತ್ತು ತಂತ್ರಾಂಶದಲ್ಲಿ ಖಾತಾ ಬದಲಾವಣೆ ಸಂದರ್ಭದಲ್ಲಿ, ಅನುಸರಿಸುವ ಕ್ರಮಗಳಾವುವು; ಈ ಕುರಿತು ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆ/ಮಾರ್ಗಸೂಚಿಗಳಾವುವು; (ಸುತ್ತೋಲೆ/ಮಾರ್ಗಸೂಚಿ ಪ್ರತಿ ಒದಗಿಸುವುದು)	ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994 ರ ನಿಯಮ 11 ರನ್ವಯ ಗ್ರಾಮ ಪಂಚಾಯತಿಯು ಯಾವುದೇ ಕಟ್ಟಡ ಅಥವಾ ಭೂಮಿಗೆ ಸಂಬಂಧಿಸಿದಂತೆ ನಿರ್ಧಾರಣಾ ಪಟ್ಟಿಯನ್ನು ತಯಾರಿಸಿದ ತರುವಾಯ, ನಿರ್ಮಿಸಿದ, ಬದಲಾಯಿಸಿದ, ಸೇರ್ಪಡೆ ಮಾಡಿದ ಅಥವಾ ಪುನರ್ ನಿರ್ಮಿಸಿದ ಯಾವುದೇ ಕಟ್ಟಡದ ಸಂಬಂಧದಲ್ಲಿ, ಪಟ್ಟಿಯಲ್ಲಿ ಬದಲಾವಣೆಯಲ್ಲಿ, ಆಸಕ್ತಿಯುಳ್ಳ ವ್ಯಕ್ತಿಗೆ ಅಂತಹ ಬದಲಾವಣೆಗೆ ಆಕ್ಷೇಪಗಳು ಯಾವುದಾದರೂ ಇದ್ದರೆ ಅವುಗಳನ್ನು ದಾಖಲು ಮಾಡಿ ಕೋರಿ ಒಂದು ತಿಂಗಳಿಗಿಂತ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ ನಮೂದನ್ನು ಸೇರಿಸುವ ಮೂಲಕ ಅಥವಾ ತೆಗೆದು ಹಾಕುವ ಮೂಲಕ ನಿರ್ಧಾರಣಾ ಪಟ್ಟಿಯನ್ನು ಬದಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಇ-ಸ್ವತ್ತು ತಂತ್ರಾಂಶದಲ್ಲಿ ತೆರಿಗೆ ನಿರ್ಧಾರಣೆ ಪಟ್ಟಿ ಮಾಡಲು E-Swathu User Manual Ver 2.0 ರ 4.3 ರಲ್ಲಿ ಮ್ಯುಟೇಷನ್ ಮಾಡುವ ಬಗ್ಗೆ ಉಪಬಂಧವಿದ್ದು, ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ.
(ಆ)	ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ಕಾವೇರಿ ತಂತ್ರಾಂಶದ ಮೂಲಕ ಆದಂತಹ ಕ್ರಯ ಇನ್ನಿತರ ದಸ್ತಾವೇಜುಗಳು ಈ ಸ್ವತ್ತು ತಂತ್ರಾಂಶದಲ್ಲಿ ಕಾಣಿಸದಿರುವ ಕಾರಣ ಗ್ರಾಮ ಪಂಚಾಯಿತಿಗಳಲ್ಲಿ ಖಾತಾ ಬದಲಾವಣೆ ಮಾಡಲು ಸಾಧ್ಯವಾಗದೇ ಹಲವಾರು ಸಮಯಗಳಿಂದ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಯಾವಾಗ ಈ ತಾಂತ್ರಿಕ ಸಮಸ್ಯೆಯನ್ನು ಸರಿಪಡಿಸಲಾಗುವುದು;	'ಕಾವೇರಿ' ತಂತ್ರಾಂಶದಲ್ಲಿ ನೋಂದಣಿಯಾದ ದಸ್ತಾವೇಜುಗಳ ವಿವರವನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ 'ಇ-ಸ್ವತ್ತು' ತಂತ್ರಾಂಶಕ್ಕೆ XML ಮೂಲಕ ಕಳುಹಿಸಲಾಗುತ್ತದೆ. ಕೆಲವು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಪಕ್ಷಕಾರರ ಗುರುತಿನ ಚೀಟಿಯ ಸಂಖ್ಯೆಯನ್ನು ಸರಿಯಾಗಿ ಕಾವೇರಿ ತಂತ್ರಾಂಶದಲ್ಲಿ ನಮೂದಿಸದಿರುವುದರಿಂದ (ಗುರುತಿನ ಚೀಟಿಯ ಸಂಖ್ಯೆ ವ್ಯಾಲಿಡೇಷನ್ ಆಗದಿರುವ) ದಸ್ತಾವೇಜುಗಳ ಮಾಹಿತಿಯು ಇ-ಸ್ವತ್ತು ತಂತ್ರಾಂಶದಲ್ಲಿ ತಿರಸ್ಕೃತಗೊಂಡು ಗ್ರಾಮ ಪಂಚಾಯತಿ ತೆರಿಗೆ ನಿರ್ಧಾರಣೆ ಪಟ್ಟಿ ಮಾಡುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಪಕ್ಷಕಾರರ ಗುರುತಿನ ಸಂಖ್ಯೆಯ ವ್ಯಾಲಿಡೇಷನ್ ವ್ಯವಸ್ಥೆಯನ್ನು ದಿನಾಂಕ: 09-09-2021 ರಿಂದ ನಿಷ್ಕ್ರಿಯಗೊಳಿಸಲಾಗಿರುತ್ತದೆ. ಪ್ರಸ್ತುತ ಇ-ಸ್ವತ್ತು ತಂತ್ರಾಂಶಕ್ಕೆ ರವಾನೆಯಾಗದಿರುವ ದಸ್ತಾವೇಜುಗಳ ಮಾಹಿತಿಯನ್ನು ಉಪನೋಂದಣಿ ಕಛೇರಿಗಳಿಂದ ಆನ್ ಲೈನ್ ಮುಖಾಂತರ ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ.

(ಇ)	ಈ ಸ್ವತ್ತು ತಂತ್ರಾಂಶದಲ್ಲಿ ಕಂಡು ಬರುವಂತಹ ತಾಂತ್ರಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಮಟ್ಟದಲ್ಲಿ ಇರುವಂತಹ ಪ್ರಾಧಿಕಾರ/ಸಂಸ್ಥೆ ಯಾವುದು; ಯಾವುದೇ ಸಮಸ್ಯೆಯ ಪರಿಹಾರ ವಿಳಂಬವಾಗಲು ಕಾರಣವೇನು; ಇಂತಹ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸಲು ಪ್ರಾಧಿಕಾರ/ಸಂಸ್ಥೆಗೆ ಕಾಲಮಿತಿ ವಿಧಿಸಿ ಜನರಲ್ಲಿ ಗ್ರಾಮ ಪಂಚಾಯಿತಿಯ ಬಗ್ಗೆ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುವುದೇ?	ಇ-ಸ್ವತ್ತು ತಂತ್ರಾಂಶದಲ್ಲಿ ಕಂಡು ಬರುವಂತಹ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ (ಇ-ಆಡಳಿತ) ವಿಭಾಗದಲ್ಲಿ eswathuhelpdesk@gmail.com ತೆರೆಯಲಾಗಿದ್ದು, ಜಿಲ್ಲಾ ಪಂಚಾಯತಿಯ ಡಿಪಿಎಂಯು ಗಳು ತಾಂತ್ರಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇ-ಮೇಲ್ ಮೂಲಕ ಸಲ್ಲಿಸಿದಲ್ಲಿ 7-10 ಕೆಲಸದ ದಿನಗಳಲ್ಲಿ ಸಮಸ್ಯೆಯನ್ನು ಪರಿಹರಿಸಲಾಗುತ್ತಿದೆ. ಇ-ಸ್ವತ್ತು ತಂತ್ರಾಂಶಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ಸಮಸ್ಯೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಪಂಚಾಯತ್ ರಾಜ್ ವಿಭಾಗದಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.


ಸಂ. ಗ್ರಾಅಪ 363 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

Fig 4.20

- In this login after approving the application you can see the Certificate by clicking on the link "ಆಸ್ತಿ ಪ್ರಮಾಣ ಪತ್ರ(ನಮೂನೆ - 11B)under "ಆಸ್ತಿ ಪ್ರಮಾಣ ಪತ್ರ"




4.3 Mutation – Transaction from SRO Office

For.the properties which have been registered in Kaveri after 01/09/2014 cannot be done the normal mutation. Such kind of properties will available in the "Transaction from SRO Office" link.

Following are the steps to do the SRO mutation.


Login To SDAA login:

- In SDAA login you can find the Transaction From SRO Office Menu link, Please click on the link to view and generate the Notice as shown in the below figure.




(1)

- When you click on the link you will find the properties that are successfully registered in SRO as shown in the below figure.
- Click on the registration number link to generate the notice.




(2)

- When you click on the registration number link you will get the following modify form.
- In this form you can modify the details such as Address if it is missing.



(3)


- You can also upload the owner identification details as shown in the below figure.




(4)

- Click on "Save and Generate Notice" button to Generate the Notice.

➢ After clicking on that button you can see the Notice that is generated as the following figure.




(5)



(6)

- Please check and take the printout of the notice in "Notice Generated Properties" link, It ensures that the Notice is generated successfully.
- When you click on the "Notice Generated Properties" link you will get the properties list which have been generated the notice as shown in the above figure.
- Click on the application number to view and take a printout of the notice which is as shown in the below figure.



(7)

- You can download the Notice by clicking on the Printer button in the report as shown in the above figure.
- After 30 days of the Notice period is completed the property will automatically available in "Mutation ಅನುಮೋದನೆಗೆ ಸಲ್ಲಿಸು" menu.